೨

ಕರ್ನಾಟಕ ಸರಕಾರ

ಸಂಖ್ಯೆ:ತಾಂ.ಶಿ.ನಿ./ಎನ್.ಬಿ.ಎ-ಇಂ/2015-16

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ:21-04-2017

## ಸುತ್ತೋಲೆ

ವಿಷಯ: ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಸರ್ಕಾರಿ ಇಂಜನೀಯರಿಂಗ್ ಕಾಲೇಜುಗಳು ಮಾನ್ಯತೆ ಪಡೆಯುವ ನಿಟ್ಟಿನಲ್ಲಿ ತಯಾರಿ ಕುರಿತು.

ಉಲ್ಲೇಖ: 1. ವಿಧಾನ ಪರಿಷತ್ತ್ ಸಚಿವಾಲಯದ ಪತ್ರ ಸಂಖ್ಯೆ: ಕವಿಪ/ಭಸ/38/ನಭ/2017 ದಿನಾಂಕ:5-4-2017 ( ಪ್ರತಿ ಲಗತ್ತಿಸಿದೆ)
2. 127ನೇ ಅಧಿವೇಶನದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ನೀಡಲಾದ ಭರವಸೆ ಸಂಖ್ಯೆ:5502

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿರುವ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆಯುವ ನಿಮಿತ್ತ ತಯಾರಿ ನಡೆಸುತ್ತಿರುವುದು ಸರಿಯಷ್ಟೆ, ಈ ನಿಟ್ಟಿನಲ್ಲಿ ಸಂಸ್ಥೆಗಳ ಎಲ್ಲಾ ಕಾರ್ಯಕ್ರಮಗಳನ್ನು ಎನ್. ಬಿ. ಎ. ಮೌಲ್ಯಮಾಪನಕ್ಕೆ ಒಳಪಡಿಸಿ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸೂಚಿಸಲಾಗಿದೆ. ಮಾನ್ಯತೆ ಪಡೆದಿರುವ ಬಗ್ಗೆ/ಮಾನ್ಯತಾ ಪ್ರಕ್ರಿಯೆ ಜಾರಿ ಇರುವ ಬಗ್ಗೆ ಕೂಡಲೇ ಮಾಹಿತಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ನಿರ್ದೇಶಕರು

**ಇವರಿಗೆ,**

**ಪ್ರಾಚಾರ್ಯರುಗಳು,** ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಇಂಜನೀಯರಿಂಗ್ ಕಾಲೇಜುಗಳು ಮತ್ತು ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಎಲ್ಲಾ ಜಂಟಿ ನಿರ್ದೇಶಕರುಗಳ ಮಾಹಿತಿಗಾಗಿ
2. ಮಾನ್ಯತಾ ಕೋಶದ ಮಾಹಿತಿಗಾಗಿ
3. ಈ-ಆಡಳಿತ ಸೂಕ್ತಕ್ರಮಕ್ಕಾಗಿ
4. ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ

# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ಸಚಿವಾಲಯ
ಅಂಚೆ ಪೆಟ್ಟಿಗೆ ಸಂ.5074, ವಿಧಾನ ಸೌಧ,
ಬೆಂಗಳೂರು-560 001.
ದಿನಾಂಕ :05-04-2017

ಸಂಖ್ಯೆ:ಕವಿಪ/ಭಸ/38/ಸಭ/2017

ಕಾರ್ಯದರ್ಶಿಯವರಿಂದ,
ಕರ್ನಾಟಕ ವಿಧಾನ ಪರಿಷತ್ತು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/
ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ,
ವಿಧಾನಸೌಧ/ವಿಕಾಸಸೌಧ/ ಬಹುಮಹಡಿಗಳ ಕಟ್ಟಡ,
ಬೆಂಗಳೂರು -560001.

ಮಾನ್ಯರೆ,

ವಿಷಯ: ವಿಧಾನ ಪರಿಷತ್ತಿನ 125, 126, 127 ಹಾಗೂ 129ನೇ ಅಧಿವೇಶನದಲ್ಲಿ ನೀಡಲಾದ ಭರವಸೆಗಳ ಬಗ್ಗೆ.

******

ವಿಧಾನ ಪರಿಷತ್ತಿನ 125, 126, 127 ಹಾಗೂ 129ನೇ ಅಧಿವೇಶನದಲ್ಲಿ ತಮ್ಮ ಇಲಾಖೆಗೆ ಸಂಬಂಧಿಸಿದ ವಿಷಯಗಳಿಗೆ ಮಾನ್ಯ ಸಚಿವರು ಸದನದಲ್ಲಿ ನೀಡಿದ ಭರವಸೆಗಳನ್ನು ನಡವಳಿಗಳಿಂದ ಆಯ್ದು ಪಟ್ಟಿ ಮಾಡಿ ಇದರೊಂದಿಗೆ ಲಗತ್ತಿಸಲಾಗಿದೆ. ಈ ಪತ್ರ ಸ್ವೀಕರಿಸಿದ ಒಂದು ತಿಂಗಳೊಳಗಾಗಿ ಸದರಿ ಭರವಸೆಗಳನ್ನು ಅನುಷ್ಠಾನಗೊಳಿಸಿ ಕೈಗೊಂಡ ಕ್ರಮದ ಬಗ್ಗೆ ಸರ್ಕಾರಿ ಭರವಸೆಗಳ ಸಮಿತಿಯ ಪರಿಶೀಲನೆಗಾಗಿ ಉತ್ತರಗಳನ್ನು ಐದು ಪ್ರತಿಗಳಲ್ಲಿ ಈ ಸಚಿವಾಲಯಕ್ಕೆ ಕಳುಹಿಸಿಕೊಡಬೇಕೆಂದು ಕೋರಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

(ಬಿ.ಆರ್. ಗಾಯತ್ರಿ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು
ದೂ.ಸಂ.22341308

ವಿಶೇಷ ಸೂಚನೆ:-

ಬಳಸಲಾದ ಸಂಕೇತಗಳು:

1. ಚು.ಗು.ಪ್ರ/ಚು.ರ.ಪ್ರ - ಚುಕ್ಕೆ ಗುರುತಿನ ಪ್ರಶ್ನೆ/ಚುಕ್ಕೆ ರಹಿತ ಪ್ರಶ್ನೆ
2. ವಿಪನ - ವಿಧಾನ ಪರಿಷತ್ತಿನ ನಡವಳಿಯ ದಿನಾಂಕ

127ನೇ ಅಧಿವೇಶನ

ಉನ್ನತ ಶಿಕ್ಷಣ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ |
|---|---|---|---|---|
| 1. | 5500 | ಚು.ಗು.ಪ್ರ:2841<br>ಪ್ರೊ: ಪಿ.ವಿ ಕೃಷ್ಣಭಟ್<br>ವಿಪನದಿ: 27.03.2015 | ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸರ್ಕಾರಿ ಹಾಗೂ ಅನುದಾನಿತ ಮಹಾವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಗೌರವಧನವನ್ನು ಹೆಚ್ಚಿಸುವ ಬಗ್ಗೆ. | ಅತಿಥಿ ಉಪನ್ಯಾಸಕರ ಗೌರವಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. |
| 2. | 5501 | ಚು.ಗು.ಪ್ರ:1396<br>ಶ್ರೀ ಇ.ಕೃಷ್ಣಪ್ಪ<br>ವಿಪನದಿ: 27.03.2015 | ಸಿ.ಇ.ಟಿ ಶುಲ್ಕಕ್ಕೆ ಸಂಬಂಧಿಸಿದಂತೆ ಕಳೆದ 8 ವರ್ಷದಿಂದ ಜಾರಿಗೆ ಬಂದಿರುವ 2006ರ ಕಾಯಿದೆಯನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗಿರುವ ಕುರಿತು. | ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ (ಪ್ರವೇಶಾತಿ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ 2006ನ್ನು ಆರಂಭದಿಂದಲೂ ತಡೆಹಿಡಿದು ಸರ್ಕಾರ ಮತ್ತು ಖಾಸಗಿ ಆಡಳಿತ ಮಂಡಳಿಯೊಂದಿಗೆ ಸಮ್ಮತಾಭಿಪ್ರಾಯ ಒಪ್ಪಂದದಂತೆ ಪ್ರತಿ ವರ್ಷ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿಯನ್ನು ನಡೆಸಲಾಗುತ್ತಿದೆ. 2015-16ನೇ ಸಾಲಿನಿಂದ 2006ರ ಅಧಿನಿಯಮವನ್ನು ಜಾರಿಗೆ ತರುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು ತಿಳಿಸಿದರು. |
| 3. | 5502 | ಚು.ರ.ಪ್ರ:2788<br>ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ<br>ವಿಪನದಿ:27.03.2015 | ಎನ್.ಬಿ.ಎ (National Board of Accreditation) ಮಾನ್ಯತೆ ಪಡೆಯಲು ವಿಫಲವಾಗಿರುವ ಸರ್ಕಾರಿ ಮತ್ತು ಖಾಸಗಿ ಇಂಜಿನಿಯರ್ ಕಾಲೇಜುಗಳಲ್ಲಿರುವ ನ್ಯೂನತೆಗಳ ಬಗ್ಗೆ. | ನ್ಯೂನತೆಗಳನ್ನು ಸರಿಪಡಿಸಿಕೊಂಡು ಆದಷ್ಟು ಶೀಘ್ರದಲ್ಲಿ ಎನ್.ಬಿ.ಎ ಸಮಿತಿಯಿಂದ ಮಾನ್ಯತೆ ಪಡೆಯುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು ತಿಳಿಸಿದರು. |
| 4. | 5503 | ಚು.ಗು.ಪ್ರ: 2766<br>ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ | ರಾಜ್ಯದಲ್ಲಿರುವ ಅನುದಾನ ರಹಿತ ಪ್ರಥಮ ದರ್ಜೆ ಸಾಮಾನ್ಯ ವರ್ಗದ ಆಡಳಿತ ಮಂಡಳಿಗಳಿಂದ | ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. |